ಚಿರೋಟಿ ಕೇಳಿದಾರೆ ಕಣೋ. ನಿಮ್ಮಿಬ್ಬರ ಕೈ ಕೊಡು. ನಾಳೆ ವಾಪಸ್ ಕೊಟ್ಬಿಡ್ತೀನಿ" ಎನ್ನುವ ಅಡಿಗೆಯವರೂ ಇರುತ್ತಿದ್ದರು. ಕಳ್ಳರು ಕೂಡ, "ಅಣ್ಣೋ, ದೊಡ್ಡ ಮನೆಗೆ ಸ್ಕೆಚ್ ಹಾಕಿವ್ನಿ. ಯಾವುದಕ್ಕೂ ನಿನ್ನ ಕೈ, ಕಾಲು ಕೊಟ್ಬಿರು. ಬೀಗ ಮುರಿಯಕ್ಕೆ, ಓಡಕ್ಕೆ ಶಾನೆ ಅನುಕೂಲ ಆಯ್ತದೆ" ಎಂದು ಕೇಳಿ ಇಸಿದುಕೊಂಡು ಹೋಗಬಹುದಿತ್ತು. "ನಾಳೆ ಒಂದು ಮುಖ್ಯ ಹಾರ್ಟ್ ಸರ್ಜರಿ ಇದೆ ಕಣಯ್ಯ. ನೀನು ನನಗಿಂತ ಎಕ್ಸ್‌ಪರ್ಟ್. ನಿನ್ನ ಕೈ ಕೊಟ್ಬಿರಯ್ಯ. ಮುಗಿದಾಕ್ಷಣ ತಂದು ಕೊಡ್ತೀನಿ" ಎಂಬ ಮಾತುಗಳು ಕೇಳಿ ಬರುತ್ತಿದ್ದವು. ಉಗ್ರರೂ ಆತ್ಮಾಹುತಿ ದಾಳಿಗಳನ್ನು ಮಾಡಬೇಕಾಗಿರಲಿಲ್ಲ. "ಉಗ್ರರ ಕೈಗಳು ನುಸುಳಿವೆಯಂತೆ" ಎಂಬುದು ಪತ್ರಿಕೆಗಳಲ್ಲಿ ವರದಿಯಾಗುತ್ತಿತ್ತು. ಮಾಲ್, ಹಾಸ್ಪಿಟಲ್, ತಾರಾ ಹೋಟೆಲ್‌ಗಳಲ್ಲಿ ಕೈ, ಕಾಲುಗಳ ಬದಲಾವಣೆಗೆಂದೇ ಪ್ರತ್ಯೇಕ ಕೋಣೆಗಳಿರುತ್ತಿದ್ದವು. ಬಟ್ಟೆ ಬದಲಾಯಿಸಿದಂತೆ ಕೈ, ಕಾಲುಗಳನ್ನೂ ಆರಾಮವಾಗಿ ಬದಲಾಯಿಸಬಹುದಿತ್ತು.

ವೃದ್ಧರದು ಇನ್ನೊಂದು ರೀತಿಯ ಅಳಲು. "ಕೈಯಿಂದ ಕೆಲಸಾನೇ ಆಗಲ್ಲ. ನಡಗುತ್ವೆ. ಕಾಲು ನೋವು, ನಡೆಯಕ್ಕಾಗಲ್ಲ. ಬಾಡಿಗೆ ತಂದ್ಕೊಡು. ಇಲ್ಲಾಂದ್ರೆ ಹೊಸಾದೇ ಮಾಡ್ಸು" ಎಂದು ಮಕ್ಕಳಿಗೆ ದೂರು ಹೇಳಿ ಬೇರೆಯದನ್ನು ಜೋಡಿಸಿಕೊಂಡು ತಮ್ಮ ಕೆಲಸ ಸಾಗಿಸಿಕೊಳ್ಳುತ್ತಿದ್ದರು. ವೈದ್ಯರಿಗೆ ಅರ್ಧ ರೋಗಿಗಳು ಕಡಿಮೆಯಾಗುತ್ತಿದ್ದರು. ಅವರ ಮಕ್ಕಳಿಗೆ ಅರ್ಧ ಟೆನ್ಷನ್ ಕಡಿಮೆಯಾಗುತ್ತಿತ್ತು. ಕೈ, ಕಾಲುಗಳಿಗೆ ಏನೇ ತೊಂದರೆಯಾಗಿದ್ದರೂ ಅಡ್ಮಿಟ್ ಆಗುವ ಅವಶ್ಯಕತೆ ಇರುತ್ತಿರಲಿಲ್ಲ. ಡಾಕ್ಟ್ರ ಬಳಿ ತೋರಿಸಿ ಬಿಚ್ಚಿಟ್ಟು ಬಂದರಾಯಿತು. ಅವುಗಳನ್ನು ಗುಣಪಡಿಸಿ, ಸರಿಪಡಿಸಿ ಫೋನ್ ಮಾಡಿದ ಮೇಲೆ ಸೇರಿಸಿಕೊಂಡು ಬಂದರಾಗುತ್ತಿತ್ತು. ಹೆಸರು, ನಂಬರು ಬರೆದುಕೊಂಡ ಕೈ, ಕಾಲುಗಳು ಆಸ್ಪತ್ರೆಯಲ್ಲಿ ಸಾಲಾಗಿ ನಿಂತಿರುತ್ತಿದ್ದವು. "ನಿಮ್ಮ ಕೈ ತಾನೇ, ಇನ್ನೂ ಗಾಯ ಮಾಯಬೇಕು. ಇನ್ನೆರೆಡು ದಿನ ಬೇಕಾಗಬಹುದು" ಎಂಬ ಮಾತು ಸಲೀಸಾಗಿ ಕೇಳಿ ಬರುತ್ತಿತ್ತು. ಟೈಲರ್‌ನ ಅಂಗಡಿಗೆ ಅಲೆದಾಡಿದಂತೆ ಆಸ್ಪತ್ರೆಗೆ ಅಲೆದಾಡುವ ಸಂದರ್ಭವಿರುತ್ತಿತ್ತೇನೋ.

ಬ್ಯೂಟಿ ಪಾರ್ಲರ್‌ಗಳಲ್ಲಿಯೂ ಇದೇ ಕಥೆ. ಮ್ಯಾನಿಕ್ಯೂರ್, ಪೆಡಿಕ್ಯೂರ್‌ಗೆಂದು ಕೊಟ್ಟು ಹೋದರೆ ಗಂಟೆ ಬಿಟ್ಟು ಬಂದು ನೇಲ್ ಪಾಲಿಶ್ ಹಾಕಿದ ಮೃದುವಾದ ಫಳಫಳಿಸುವ ಕೈಯನ್ನೋ, ಕಾಲನ್ನೋ ಹಾಕಿಕೊಳ್ಳಬಹುದಿತ್ತು. ಬಳೆಗಾಗಿ ಅಳತೆಯ ಬಳೆ ಕೊಟ್ಟು ಕಳಿಸುವ ಬದಲು ಕೈಯನ್ನೇ ಕೊಟ್ಟು ಕಳಿಸಿದರೆ ಕೆಲಸ ತಪ್ಪಿಸಿಕೊಳ್ಳಲೂ ಸಹಾಯವಾಗುತ್ತಿತ್ತು. ಮದುವೆ ಮುಂತಾದ ಸಮಾರಂಭಗಳಲ್ಲಿ ಮೆಹಂದಿಗೋಸ್ಕರ ರಾತ್ರಿಯೆಲ್ಲ ಕಾಯುತ್ತ ಗಂಟೆಗಟ್ಟಲೆ ಕುಳಿತುಕೊಳ್ಳುವದು ಬೇಕಿರಲಿಲ್ಲ. ಬಿಚ್ಚಿಕೊಟ್ಟು ಆರಾಮಕ್ಕೆ ಮಲಗಿಬಿಡಬಹುದಾಗಿತ್ತು. ಬೆಳಿಗ್ಗೆ ಒಣಗಿದ ಮೆಹೆಂದಿ ಚಿತ್ತಾರದ ಕೈ, ಕಾಲುಗಳನ್ನು (ಅವರದೇ) ಜೋಡಿಸಿಕೊಳ್ಳಲು ಸರಿಹೋಗುತ್ತಿತ್ತು.

ಕಳ್ಳರಿಗೂ ಒಂದು ರೀತಿಯ ಅನುಕೂಲವಾಗುತ್ತಿತ್ತು. ಒಡವೆ ಬಿಚ್ಚಿಕೊಡದಿದ್ದರೆ ಕೈ ಕತ್ತರಿಸಿಕೊಂಡು ಹೋಗಿ ಪ್ರಾಣಾಪಾಯ ಉಂಟು ಮಾಡುವ ಪ್ರಮೇಯವೇ ಇರುತ್ತಿರಲಿಲ್ಲ. ಬಿಚ್ಚಿ ಕೊಂಡೊಯ್ದರೆ ಸಾಕು. ಎರಡು ದಿನಗಳ ನಂತರ, "ಇಂಥ ಬಡಾವಣೆಯಲ್ಲಿ ಇಂಥ ಆಕಾರ, ಗಾತ್ರದ ಕೈ ಸಿಕ್ಕಿದೆ. ಬಡಾವಣೆಯ ಪೊಲೀಸ್ ಸ್ಟೇಷನ್ನಿಗೆ ಬಂದು ನೋಡಿ" ಎಂಬ ಒಕ್ಕಣೆಯುಳ್ಳ ಸುದ್ದಿಗಳು ಪತ್ರಿಕೆಗಳಲ್ಲಿ, ಮೊಬೈಲಿನ ಮೆಸೇಜುಗಳಲ್ಲಿ ಧಾರಾಳವಾಗಿ ಲಭ್ಯವಾಗುತ್ತಿದ್ದವು. ಕಳ್ಳಕಾಕರಿಗೂ ಕೋರ್ಟು, ಜೈಲು ಶಿಕ್ಷೆಗಿಂತ ಕೈಕಾಲುಗಳ ನಟ್, ಬೋಲ್ಟ್